**- -** ಅಸಲು ದಾವೆ ಸಂ**: 05/2023.** ಪಿ .ಡಬ್ಲು**-1**

**ದಿ: 30-10-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಬಿ.ಎಸ್. ವಕೀಲರಿಂದ:**

1. ನನಗೆ ಇಂಗ್ಲೀಷ್ ಭಾಷೆ ಓದಲು ಬರೆಯಲು ಬರುವುದಿಲ್ಲ ನಾನು ಕನ್ನಡದಲ್ಲಿ ಸಹಿ ಮಾತ್ರ ಮಾಡುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿರುತ್ತದೆ. ಈ ದಾವೆಯನ್ನು ಪ್ರತಿವಾದಿ ದಾವಾ ಸ ನಂ 152 ಒಟ್ಟು 16 ಎಕರೆ 39 ಗುಂಟೆ ಇದರಲ್ಲಿ 02 ಎಕರೆ 09 ಗುಂಟೆ ನನಗೆ ಒತ್ತಿ ರಜಿಸ್ಟ್ರರ್ ಬರೆದುಕೊಟ್ಟಿದ್ದು, ಈಗ ಹೊಲ ಆದರೂ ಕೊಡಲಿ ಇಲ್ಲದಿದ್ದರೆ ಹಣ ಕೊಡಲಿ ಎಂದು ಪರಿಹಾರ ಕೇಳಿ ಸಲ್ಲಿಸಿದ್ದೇನೆ. ಒತ್ತಿ ರಜಿಸ್ಟ್ರರ್ ಪತ್ರವನ್ನು ಪ್ರತಿವಾದಿ 2012 ನೇ

ಸಾಲಿನಲ್ಲಿ 1 ಅಥವಾ 2ನೇ ತಾರೀಖಿನಿಂದು ಬರೆದುಕೊಟ್ಟಿದ್ದು ತಿಂಗಳು ನನಗೆ ನೆನಪಿಲ್ಲ. ಒತ್ತಿ ರಜಿಸ್ಟ್ರರ್ ಪತ್ರವನ್ನು ಯಾರು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಒತ್ತಿ ರಜಿಸ್ಟ್ರರ್ ಪತ್ರಕ್ಕೆ ನಾನು, ಪ್ರತಿವಾದಿ ಮತ್ತು ಸಾಕ್ಷಿದಾರರಾಗಿ ಸೂರಿಬಸವರಾಜ ಮತ್ತು ಹುಲಿಗೆಪ್ಪ ಇವರು ಸಹಿ ಮಾಡಿರುತ್ತೇವೆ. ಹುಲಿಗೆಪ್ಪನ ತಂದೆಯ ಹೆಸರು ಕರಣೆಪ್ಪ ಅಂತಾ ಇರುತ್ತದೆ. ಒತ್ತಿ ರಜಿಸ್ಟ್ರರ್ ಪತ್ರದಲ್ಲಿ ಏನೇನು ಬರೆದಿದ್ದಾರೆ ಎಂದರೆ ನನಗೆ ಓದಲಿಕ್ಕೆ ಬರುವುದಿಲ್ಲ ಎನ್ನುತ್ತಾರೆ. 2012 ರಲ್ಲಿ ಪ್ರತಿವಾದಿಗೆ ರೂ 2,00,000/- ಹಣವನ್ನು ದೇವದುರ್ಗ ದಲ್ಲಿ ಕೊಟ್ಟಿದ್ದೇನೆ. ರೂ. 2,00,000/- ಲಕ್ಷ ಮೊತ್ತ ಯಾವ ಮುಖಬೆಲೆಯ ನೋಟುಗಳು ಇದ್ದವು ಎಂದರೆ ಸಾಕ್ಷಿಯು 1000 ಮತ್ತು 500 ನೋಟುಗಳು ಇದ್ದವು ಯಾವ ಯಾವ ನೋಟುಗಳು ಎಷ್ಟು ಇದ್ದವು ಎಂದು ನನಗೆ ನೆನಪಿಲ್ಲ. ಒತ್ತಿ ರಜಿಸ್ಟ್ರರ್ ಪತ್ರದಲ್ಲಿ ರೂ 2,00,000/- ಹಣ ನಗದು ರೂಪದಲ್ಲಿ ಅಥವಾ ಚೆಕ್ ಮೂಲಕ ಬ್ಯಾಂಕ್ ಟ್ರಾನ್ಸ್ ಫಾರ ಮೂಲಕ ಯಾವ ತಾರೀಖಿನಿಂದು ಹಣ ಪಾವತಿಸಿದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಹಣ ಪಾವತಿಸಿರುತ್ತೇನೆ ಎನ್ನುತ್ತಾರೆ. ಒತ್ತಿ ರಜಿಸ್ಟ್ರರ್ ಪತ್ರದಲ್ಲಿ ರೂ 2,00,000/- ಹಣವನ್ನು ಯಾವ ರೂಪದಲ್ಲಿ ಕೊಟ್ಟಿದ್ದೀರಿ ಎಂದು ನಮೂದು ಮಾಡದೇ ಈಗ ರೂ 2 ಲಕ್ಷ ಕೊಟ್ಟಿದ್ದೇನೆಂದು ಸುಳ್ಳು ಹೇಳತ್ತಿದ್ದೀರಿ ಎಂದರೆ ಸರಿಯಲ್ಲ. ರೂ 2 ಲಕ್ಷಗಳಿಗೆ ಬಡ್ಡಿ ತಿಂಗಳಗೆ ರೂ 2% ರಂತೆ ಬಡ್ಡಿ ಕೊಡಬೇಕೆಂದು ಮಾತುಕತೆಯಾಗಿರುತ್ತದೆ. ರೂ 2 ಲಕ್ಷ ಗಳಿಗೆ ಬಡ್ಡಿ ಸೇರಿಸಿ ಕೊಡಬೇಕು ಎಂದು ನಮೂದು ಮಾಡಿಸಿದ್ದೀರಾ ಎಂದರೆ ಸಾಕ್ಷಿಯು ಮಾಡಿಸಿದ್ದೇನೆ ಎನ್ನುತ್ತಾರೆ. ಒತ್ತಿ ರಜಿಸ್ಟ್ರರ್ ಪತ್ರದಲ್ಲಿ ರೂ 2 ಲಕ್ಷಕ್ಕೆ ಎಷ್ಟು ಪ್ರತಿ ಶತ ಬಡ್ಡಿ ಕಟ್ಟಬೇಕು ಎಂದು ಎಲ್ಲಿಯೂ ನಮೂದು ಮಾಡಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ದಿನಾಂಕ: 09-05-2016 ರಂದು ಪ್ರತಿವಾದಿಯು ನಗದು ರೂಪದಲ್ಲಿ 96,000/- ಗಳನ್ನು ಅವರ ಸಹೋದರರಾದ ದುರಗಪ್ಪ ತಂದೆ ಹನುಮಂತ ಮತ್ತು ಸಾಕ್ಷಿದಾರರಾದ ಸಾಹೇಬಗೌಡ ತಂದೆ ಗೌಡಪ್ಪ ಮತ್ತು ಅಮರೇಶಯ್ಯ ಸ್ವಾಮಿ ತಂದೆ ಚನ್ನಯ್ಯಸ್ವಾಮಿ, ಗ್ರಾಮ ಪಂಚಾಯಿತಿ ಮೆಂಬರ್ ಸಾ: ಗಬ್ಬೂರು ಇವರ ಸಮಕ್ಷಮದಲ್ಲಿ ನಿಮಗೆ ಪಾವತಿಸಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎನ್ನುತ್ತಾರೆ. ರೂ 96,000/- ಗಳನ್ನು ಪ್ರತಿವಾದಿ ನಿಮಗೆ ನಗದು ರೂಪದಲ್ಲಿ ಪಾವತಿಸಿದ್ದರೂ ಸದರಿ ವಿಷಯವನ್ನು ನಿಮ್ಮ ವಾದ ಪತ್ರದಲ್ಲಿ ಮುಚ್ಚಿಟ್ಟು ಸುಳ್ಳು ದಾವಾ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ನಿಮಗೆ ರೂ 96,000/- ಗಳನ್ನು ಪಾವತಿ ಮಾಡಿದ್ದರೂ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ರೂ. 2,00,000/- ಹಣ ಪ್ರತಿವಾದಿ ನಿಮಗೆ ಪಾವತಿ ಮಾಡಬೇಕೆಂದು ಸುಳ್ಳು ಹೇಳಿ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸಂಪೂರ್ಣ ಸುಳ್ಳಾಗಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ